**ಅಸಲು ದಾವಾ ನಂಃ 115/2016**
**ಡಿ.ಡಬ್ಲ್ಯೂಃ 01**

**ದಿನಾಂಕಃ 18.07.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: ಶ್ರೀ ಎಂ ಎಸ್ ಆರ್ ವಾದಿ ಪರ ವಕೀಲರಿಂದ**

1. ವಾದಿಯು ಪರಿಚಯ ಇರುತ್ತಾರೆ. 2 ರಿಂದ 4 ನೇ ಪ್ರತಿವಾದಿಯವರು ಗೊತ್ತಿರುತ್ತಾರೆ. ರೀ ಸರ್ವೆ ನಂಬರ್ 37/5 ರ 4 ಎಕರೆ ಜಮೀನನ್ನು 13.01.2006 ರಂದು ವೃಷಬೇಂದ್ರಯ್ಯ ಮತ್ತು ಅವರ ಪತ್ನಿ ಮತ್ತು ಮಕ್ಕಳಿಂದ ಖರೀದಿ ಮಾಡಿರುತ್ತೇನೆ ಎಂದರೆ ಸರಿ. ಅದೇ ದಿನ 2 ನೇ ಪ್ರತಿವಾದಿಯು ಅವರಿಂದಲೇ 3 ಎಕರೆ ಎಕರೆ ಜಮೀನನ್ನು ಖರೀದಿ ಮಾಡಿದ್ದರು ಎಂದರೆ ಸರಿ. ಅದೇ ದಿನ ವಾದಿಯು ದಾವಾ ಸ್ವತ್ತನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿ. ವಾದಿ, 2 ನೇ ಪ್ರತಿವಾದಿ ಮತ್ತು ನನ್ನ ಕ್ರಯ ಪತ್ರಗಳು ನೂದಣಿ ಯಾಗಿವೆ ಎಂದರೆ ಸರಿ. ದಾವಾ ಸ್ವತ್ತಿನ ಒಟ್ಟು ವಿಸ್ತೀರ್ಣ 15 ಎಕರೆ 27 ಗುಂಟೆ ಇದೆ ಎಂದರೆ ಸರಿ. ಸದರಿ ಮೂರು ಕ್ರಯ ಪತ್ರ ಗಳ ಪ್ರಕಾರ ಪಹಣಿ ಪತ್ರಗಳಲ್ಲಿ ಮಾಲೀಕರ ಹೆಸರು ನಮೂದಾಗಿವೆ ಎಂದರೆ ಸರಿ. ನಾನು ಖರೀದಿ ಮಾಡಿರುವ 4 ಎಕರೆಗೆ ವಾದಿ ಅಥವಾ 2 ನೇ ಪ್ರತಿವಾದಿ ಯಾವುದೇ ಮಾಲೀಕತ್ವ ಇಲ್ಲ ಎಂದರೆ ಸರಿ. 2 ನೇ ಪ್ರತಿವಾದಿಯು ಖರೀದಿ ಮಾಡಿರುವ ಜಮೀಗೆ ನನಗಾಗಲೀ ವಾದಿಗಾಗಲೀ ಮಾಲೀಕತ್ವ ಇಲ್ಲ ಎಂದರೆ ಸರಿ ಅದೇ ರೀತಿ ವಾದಿಯು ಖರೀದಿ ಮಾಡಿರುವ ಜಾಗಕ್ಕೆ ನನಗಾಗಲೀ 2 ನೇ ಪ್ರತಿವಾಗದಿಗಾಗಲೀ ಮಾಲೀಕತ್ವ ಇಲ್ಲ ಎಂದರೆ ಸರಿ.

2. ನನ್ನ ಜಮೀನಿನ ಉತ್ತರಕ್ಕೆ ವಾದಿಯ ಜಮೀನು ಬರುತ್ತದೆ ಎಂದರೆ ಸರಿ. ನನ್ನ ಜಮೀನಿನ ದಕ್ಷಿಣಕ್ಕೆ ದಕ್ಷಿಣಕ್ಕೆ ರಂಗಸ್ವಾಮಿ ಮತ್ತು ಶ್ರೀಗಂಪ್ಪ ಇವರ ಜಮೀನು ಬರುತ್ತದೆ ಎಂದರೆ ಸರಿ. ಸದರಿ ರಂಗಸ್ವಾಮಿ ನನ್ನ ದೊಡ್ಡಪ್ಪನ ಮಗ ಎಂದರೆ ಸಾಕ್ಷಿಯು ಅವರು ಸಂಬಂಧಿಯಾಗುತ್ತಾರೆ ಆದರೆ ಹೇಗೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಶ್ರೀರಂಗಪ್ಪ ಇವರ ಮಗಳನ್ನು ಮದುವೆಯಾಗುತ್ತೇನೆ ಎಂದರೆ ಸರಿ. ನನ್ನ ಜಮೀನಿನ ದಕ್ಷಿಣಕ್ಕೆ ನನ್ನ ಸಂಬಂಧಿಕರು ಮತ್ತು ನನ್ನ ಪತ್ನಿಯ ಜಮೀನು ಬರುತತವೆ ಎಂದರೆ ಸರಿ. ನಾನು ಜಮೀನಿನನ್ನು ಖರೀದಿ ಮಾಡುವ ಕಾಲಕ್ಕೆ ಸರ್ವೆ ಮಾಡಿಸಿಲ್ಲ ಎಂದರೆ ಸರಿ. ನಾವು ಮೂರು ಜನ ನಮ್ಮ ನಮ್ಮ ಜಮೀನಿನ ಕಂದಾಯ ಕಟ್ಟುತ್ತಿದ್ದೇವೆ ಎಂದರೆ ಸರಿ. ವಾದಿಯು ಅವರ ಜಮೀನಿನ ಕಬ್ಜೆಯಲ್ಲಿದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಯು ಅವರ ಜಮೀನನ್ನು ಅಡಮಾನ ಮಾಡಿ ಸಾಲ

ಪಡೆದುಕೊಂಡಿರುತ್ತಾರೆ ಎಂದರೆ ಸರಿ.  ನಾನು ಸಹಾ ಸಾಲ ಪಡೆದುಕೊಂಡಿರುತ್ತೇನೆ.

**ಅಸಲು ದಾವಾ ನಂಃ 115/2016**
**ಡಿ.ಡಬ್ಲ್ಯೂಃ 01**

3. 2016 ನೇ ಏಪ್ರಿಲ್ ಮಾಹೆ 2 ನೇ ವಾರದಲ್ಲಿ ನಾನು ಮತ್ತು ಪ್ರತಿವಾದಿಗಳು ಸೇರಿ ವಾದಿಯ ದಾವಾ ಸ್ವತ್ತಿನ ಕಬ್ಜೆಗೆ ತೊಂದರೆ ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ವಾದಿಯು ನಮಗೆಲ್ಲರಿಗೂ ಗ್ರಾಮದ ಹಿರಿಯರಿಂದ ಬುದ್ಧಿವಾದ ಹೇಳಿಸಿದ್ದರು ಎಂದರೆ ಸರಿಯಲ್ಲ. ಆದರೂ ಸಹಾ ನಾನು ಉಳಿದ ಪ್ರತಿವಾದಿಗಳೊಂದಿಗೆ ಷಾಮಿಲಾಗಿ 2016 ಮೇ ಕೊನೆ ವಾರದಲ್ಲಿ ವಾದಿಯ ದಾವಾ ಸ್ವತ್ತಿನ ಕಬ್ಜೆಗೆ ತೊಂದರೆ ಕೊಟ್ಟು ಅವರ ಹಕ್ಕು ನಿರಾಕರಣೆ ಮಾಡಿದ ಕಾರಣ ಈ ದಾವೆ ಮಾಡಿದ್ದಾರೆ ಎಂದರೆ ಸುಳ್ಳು .

**( ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,**
**ನ್ಯಾಯಾಧೀಶರು, ಚಳ್ಳಕೆರೆ.**